**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸಂಡೂರು**
**ಸಿ.ಸಿ. ನಂ: 22/2022**

| | | | |
|---|---|---|---|
| **ಸಾಕ್ಷಿದಾರರ ಹೆಸರು** | **:** | **ಪರ್ಶುನಾಯ್ಕ** | **ಪಿ.ಡಬ್ಲ್ಯೂ-12** |
| **ತಂದೆಯ/ಗಂಡನ ಹೆಸರು** | **:** | **ಶೇಖರನಾಯ್ಕ್ಲ** | **ಸಿ.ಡಬ್ಲ್ಯೂ-11** |
| **ವಯಸ್ಸು** | **:** | **48 ವರ್ಷ** | |
| **ಉದ್ಯೋಗ** | **:** | **ಪೋಲಿಸ್ ಪೇದೆ, ಡಿ.ಸಿ.ಆರ್.ಇ.ಪೋಲಿಸ್ ಠಾಣೆ, ವಿಜಯನಗರ** | **ಸಾಕ್ಷಿಗೆ ಪ್ರಮಾಣ ವಚನ ಭೋದಿಸಿದ ದಿನಾಂಕಃ 15.07.2025.** |
| **ವಾಸಸ್ಥಳ** | **:** | **ವಿಜಯನಗರ** | |

**ಸಾಕ್ಷಿಯ ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ನಾನು ಸಂಡೂರು ಪೋಲೀಸ್ ಠಾಣೆಯಲ್ಲಿ ಪಿ.ಸಿ ಆಗಿ 2019 ರಿಂದ 2022 ರವರೆಗೆ ಕೆಲಸ ನಿರ್ವಹಿಸಿರುತ್ತೇನೆ.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ದಿನಾಂಕಃ 24.08.2021 ರಂದು ಸಂಡೂರು ಪೋಲಿಸ್ ಠಾಣೆಯಲ್ಲಿ ಗುನ್ನ ಸಂಖ್ಯೆಃ 90/2021 ರಂತೆ ಪ್ರಕರಣ ದಾಖಲಾಗಿದ್ದು, ಸದರಿ ಪ್ರಕರಣದ 2 ನೇ ಆರೋಪಿಯ ಪತ್ತೆ ಕುರಿತು ಚಾಸಾ-15 ರವರು ನನಗೆ ನೇಮಕ ಮಾಡಿದ್ದು, ದಿಃ 11.12.2021 ರಂದು ನಾನು 2 ನೇ ಆರೋಪಿಯನ್ನು ಹೊಸಪೇಟೆಯ 32 ನೇ ವಾರ್ಡ್, ತಳವಾರ ಕೇರಿಯಲ್ಲಿ ಪತ್ತೆ ಮಾಡಿ, ಚಾಸಾ-15 ರವರ ಮುಂದೆ ಹಾಜರು ಮಾಡಿರುತ್ತೇನೆ. ಈ ಬಗ್ಗೆ ನಾನು ಹೇಳಿಕೆಯನ್ನು ನೀಡಿರುತ್ತೇನೆ. ನ್ಯಾಯಾಲಯದ ಮುಂದೆ ಇರುವ 2 ನೇ ಆರೋಪಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ.ಎ.ಹೆಚ್.ಎಸ್.ವಕೀಲರಿಂದಃ**

ಚಾಸಾ-15 ನನ್ನ ಮೇಲಾಧಿಕಾರಿ ಎಂದರೆ ಸರಿ. ಚಾಸಾ-15 ರವರು ಯಾವ ದಿನಾಂಕದಂದು 2 ನೇ ಆರೋಪಿಯನ್ನು ಪತ್ತೆ ಹಚ್ಚಲು ಹೇಳಿರುತ್ತಾರೆ ಅಂತ

This is a True Copy of the Court Records Online. Authenticated @ districts.ecourtsindia.com/cnr/KABI600000632022/truecopy/order-7.pdf

www.ecourtsindia.com

ಇರುವುದಿಲ್ಲ ಎಂದರೆ ಸರಿಯಲ್ಲ. ದಿಃ 11.12.2021 ರಂದು ಚಾಸಾ-15 ರವರ ನನಗೆ ಆದೇಶ ಮಾಡಿರುತ್ತಾರೆ. ಅವರು ನನಗೆ ಬೆಳಗ್ಗೆ 10.00 ಗಂಟೆಗೆ ಆದೇಶ ಮಾಡಿರುತ್ತಾರೆ. ನಾನು ಸದರಿ ವಿಳಾಸದಲ್ಲಿ ಇರುವ ಠಾಣೆಗೆ ಮಾಹಿತಿ ನೀಡಿರುತ್ತೇನೆ. ಯಾವ ಠಾಣೆಗೆ ಮಾಹಿತಿ ನೀಡಿರುತ್ತೇನೆ ಮತ್ತು ಎಷ್ಟು ಸಮಯಕ್ಕೆ ಹೋಗಿರುತ್ತೇನೆ ಎಂದು ನನ್ನ ಹೇಳಿಕೆಯಲ್ಲಿ ಹೇಳಿರುವುದಿಲ್ಲ ಎಂದರೆ ಸರಿ. ನನಗೆ 2 ನೇ ಆರೋಪಿಯ ಪರಿಚಯವಿರಲಿಲ್ಲ. 2 ನೇ ಆರೋಪಿ ಪತ್ತೆ ಹಚ್ಚಲು ನಾನು ಒಬ್ಬನೇ ಹೋಗಿರುತ್ತೇನೆ. ನನಗೆ 2 ನೇ ಆರೋಪಿಯ ಪರಿಚಯ ಇರಲ್ಲಿಲ್ಲ, ನಾನು ಅವರಿಗೆ ಪತ್ತೆ ಹಚ್ಚಿ ಚಾಸಾ-15 ರವರ ಮುಂದೆ ಹಾಜರುಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ನಮ್ಮ ಮೇಲಾಧಿಕಾರಿಗಳ ಮಾತು ಕೇಳಿ ಸುಳ್ಳು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ.ಹೇ.ಕೆ.ಸರಿ.ಇದೆ.**

**ಪ್ರ.ದ.ನ್ಯಾ.ದಂಡಾಧಿಕಾರಿಗಳು,**
**ಸಂಡೂರು.**

This is a True Copy of the Court Records Online. Authenticated @ districts.ecourtsindia.com/cnr/KABI600000632022/truecopy/order-7.pdf

www.ecourtsindia.com